ಅ) ಕಳೆದ ಮೂರು ವರ್ಷಗಳಲ್ಲಿ ಮಂಡಳಿಯ ವತಿಯಿಂದ ಕೈಗೊಳ್ಳಲಾಗಿರುವ ಅಭಿವೃದ್ಧಿ ವಿವರಗಳು ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

ಕೊಳಚೆ ಪ್ರದೇಶದ	1994-95	1995-96	1996-97
ಎ. ಡಿ. ಹಳ್ಳಿ ಕೊಳಚೆ ಪ್ರದೇಶ	ಕಿರುನೀರು ಸರಬರಾಜು ಹಾಸುಗಲ್ಲು ರೂ. 1.50	ಕಿರುನೀರು ಸರಬರಾಜು ಚರಂಡಿ ರೂ. 2.50	ವಸತಿ ಗೃಹಗಳ ವಿಶೇಷ ದುರಸ್ತಿ ಕಾಮಗಾರಿಗಳು (ಭಾವಣಿಗೆ ಮಡ್ಡಿ ಹಾಕುವುದು) ರೂ. 11.50
ಗಜಾನನ ಟಾಕೀಸ್	ಕಿರು ನೀರು ಸರಬರಾಜು ರೂ. 1.00	ಹಾಸುಗಲ್ಲು ಚರಂಡಿ ರೂ.0.80	ಒಳಚರಂಡಿ: ಮೆಟ್ಟಿಲುಗಳು ರೂ. 1.00
ಭೋವಿ ಪಾಳ್ಯ	ಇಲ್ಲ	ಇಲ್ಲ	ಚರಂಡಿ ಕೆಲಸ ರೂ. 1.00
ಗೊರಗುಂಟೆಪಾಳ್ಯ	ಇಲ್ಲ	ಇಲ್ಲ	ಒಳಚರಂಡಿ ರೂ. 1.00
ಇಂದಿರಾ ನಗರ	ನ್ಯಾಯಾಲಯದಲ್ಲಿ ತಗಾದೆ ಇರುವ ಕಾರಣ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ		

ಇ) ಮೇಲ್ಕಂಡ 5 ಕೊಳಚೆ ಪ್ರದೇಶಗಳ ಪೈಕಿ ಅಗ್ರಹಾರ ದಾಸರಹಳ್ಳಿ ಕೊಳಚೆ ಪ್ರದೇಶಗಳಲ್ಲಿ 210 ಮನೆಗಳನ್ನು ಕಟ್ಟಲಾಗಿದ್ದು, ಈ ಫಲಾನುಭವಿಗಳ ಪೈಕಿ ಪ್ರಾರಂಭಿಕ ಠೇವಣಿ, ನೋಂದಣಿ ಶುಲ್ಕವನ್ನು ಮಂಡಳಿಗೆ ಪಾವತಿಸಿರುವ 102 ಫಲಾನುಭವಿಗಳಿಗೆ ಮಾತ್ರ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಉಳಿದ 4 ಕೊಳಚೆ ಪ್ರದೇಶಗಳಲ್ಲಿ ವಸತಿ ಗೃಹ ಯೋಜನೆಯನ್ನು ಕೈಗೊಂಡಿರುವುದಿಲ್ಲ.

ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ಹೌಸಿಂಗ್ ಬೋರ್ಡ್ ಮನೆಗಳು.

145 (239) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರವಿಸುವರೆ ?

ಅ) ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ (ಹಂತ 1 ಮತ್ತು 2) ಇರುವುದೇ ನಿಜವೇ; (ಈ ಎರಡೂ ಹಂತಗಳಲ್ಲಿ ಗೃಹ ಮಂಡಳಿ ಹಂಚಿಕೆಯಾಗಿರುವ ಮನೆಗಳ ವಿವರಗಳನ್ನು ನೀಡುವುದು).

ಆ) ಹಾಗಿದ್ದಲ್ಲಿ ಎಷ್ಟು ಮನೆಗಳಿಗೆ ಅವಧಿ ಮೀರಿದ ನಂತರ ಶುದ್ಧ ಕ್ರಯ ಪತ್ರವನ್ನು ನೀಡಲಾಗಿದೆ;

ಇ) ಹಂಚಿಕೆ ಮಾಡುವ ಬಗ್ಗೆ ನೀಡಲಾಗಿದ್ದ ಜಾಹಿರಾತಿನ ಮೊತ್ತಕ್ಕೂ ಶುದ್ಧ ಕ್ರಯ ಪತ್ರ ನೀಡುವಾಗ ಸಂಗ್ರಹಿಸಲಾಗಿರುವ ಮೊತ್ತಕ್ಕೂ ಇರುವ ಅಂತರವೇನು? ಹಾಗೂ ಈ ಅಂತರಕ್ಕೆ ಇರುವ ಕಾರಣಗಳೇನು;

ಈ) ಈ ಪ್ರದೇಶಗಳಲ್ಲಿ ಇರುವ ಸಾರ್ವಜನಿಕ : ಉಪಯೋಗಿ ನಿವೇಶನಗಳ (ಸಿ ಎಸ್ಸೈರ್) ವಿವರಗಳನ್ನು ನೀಡುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ರೇವಣ್ಣ) :

ಅ) ರಾಜಾಜಿನಗರ ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಗೃಹ ಮಂಡಳಿಯಿಂದ 1 ಮತ್ತು 2 ನೇ ಹಂತದ ಮನೆಗಳನ್ನು ಕಟ್ಟಿ ಹಂಚಿಕೆ ಮಾಡಿರುವುದು ನಿಜ . ವಿವರಗಳನ್ನು ಅನುಬಂಧ- 1 ರಲ್ಲಿ ನೀಡಲಾಗಿದೆ.

ಆ) ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಂಚಿಕೆಯಾದ ಎಲ್ಲಾ ಮನೆಗಳ ಅವಧಿಯೂ ಮುಗಿದಿರುತ್ತದೆ. ಆದರೆ ಹಂಚಿಕೆದಾರರು ಪೂರ್ಣ ಹಣ ಕಟ್ಟಿ ಶೇಕಡ. 80 ರಷ್ಟು ಮಂದಿ ಶುದ್ಧ ಕ್ರಯ ಪತ್ರವನ್ನು ಪಡೆದಿರುತ್ತಾರೆ.

ಇ) ಹಂಚಿಕೆ ಮಾಡುವ ಬಗ್ಗೆ ನೀಡಲಾಗಿದ್ದ ಜಾಹಿರಾತಿನ ಮೊತ್ತಕ್ಕೂ ಶುದ್ಧ ಕ್ರಯ ಪತ್ರ ನೀಡುವಾಗ ಸಂಗ್ರಹಿಸಲಾಗಿರುವ ಮೊತ್ತಕ್ಕೆ ಇರುವ ಅಂತರಗಳನ್ನು ಅನುಬಂಧ- 2 ರಲ್ಲಿ ನೀಡಲಾಗಿದೆ.

ಡಿಮಾಂಡ್ ಸರ್ವೆ ಜಾಹಿರಾತು ಅವಧಿಗೂ , ಟೆಂಡರ್‌ನ ಅವಧಿ ಬಹಳ ಅಂತರ ಇರುವುದೇ, ಬೆಲೆ ಹೆಚ್ಚಳಿಕೆಗೆ ಕಾರಣ. ಕೆಲವು ಮನೆಗಳು ಮಂಡಳಿಯ ಹಂಚಿಕೆ ವಿಸ್ತೀರ್ಣಕ್ಕಿಂತ ಹೆಚ್ಚಾಗಿ ಜಾಗ ಹೊಂದಿದ್ದಲ್ಲಿ ಅಂತರ ಮನೆಗಳ ಬೆಲೆಯನ್ನು ಮಂಡಳಿ ನಿಯಮಾನುಸಾರ ಹೆಚ್ಚಿಸಲಾಗುವುದು. ಕರ್ನಾಟಕ ಗೃಹ ಮಂಡಳಿಯನ್ನು ಲಾಭ ಮತ್ತು ನಷ್ಟವಿಲ್ಲದ ಸಂಸ್ಥೆಯಾಗಿ ರಚಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಈ) ಈ ಪ್ರದೇಶದಲ್ಲಿ ಯಾವುದೇ ಸಾರ್ವಜನಿಕ ಉಪಯೋಗ ನಿವೇಶನಗಳು (ಸಿ.ಎ.ಸೈಟ್) ಇರುವುದಿಲ್ಲ.

ಮುಜರಾಯಿ ಇಲಾಖೆಯ ದೇವಸ್ಥಾನಗಳ ಅಭಿವೃದ್ಧಿ

147 (290) ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಯ : ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳು ಒಟ್ಟು ಸಂಖ್ಯೆ ಎಷ್ಟು ; ಅವುಗಳಲ್ಲಿ ವಾರ್ಷಿಕ 10 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಆದಾಯ ಬರುವ ದೇವಸ್ಥಾನಗಳು ಯಾವುವು; (ಪೂರ್ಣ ವಿವರ ನೀಡುವುದು)

ಆ) ಆರ್ಥಿಕ ಸಂಪನ್ಮೂಲಗಳಿಲ್ಲದ ಪೂಜೆ: ವಿನಿಯೋಗಕ್ಕೆ ತೊಂದರೆಯಲ್ಲಿರುವ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು;